**ಸಿ.ಸಿ.ನಂ.: 557/2023**

ಪಿ.ಡಬ್ಲ್ಯೂ: **2**

(ಇಂದು ದಿನಾಂಕಃ **04-02-2026** ರಂದು ಸತ್ಯ ಪ್ರತಿಜ್ಞೆಯ ಮೇರೆಗೆ ಪ್ರಮಾಣ ವಚನ ಬೋಧಿಸಲಾಯಿತು.)

**ಪಾಟೀ ಸವಾಲು –ಆರೋಪಿ ಪರ ಕುಮಾರಿ. ಪಿ.ಆರ್.ಎಸ್. ವಕೀಲರಿಂದ**

1. ನಾನು ಖಾಸಗಿ ಬ್ಯಾಂಕಿನಲ್ಲಿ ಕೆಲಸವನ್ನು ಮಾಡುತ್ತೇನೆ. ನಾನು ಕಳೇದ 9 ½ ಯಿಂದ 10 ವರ್ಷಗಳ ಅವಧಿಯಿಂದ ಸದ್ರಿ ಬ್ಯಾಂಕಿನಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ. ನಾನು ಮಾತೋಶ್ರಿ ಬ್ಯಾಂಕಿನಲ್ಲಿ ಶಾಖಾ ವ್ಯವಸ್ಥಾಪಕನಾಗಿ ಕರ್ತವ್ಯ ನಿರ್ವಹಿಸತ್ತಿದ್ದೇನೆ. ನಾನು ಸದ್ರಿ ಬ್ಯಾಂಕಿನಲ್ಲಿ ಬೆಳಿಗ್ಗೆ 09-00 ರಿಂದ ಸಂಜೆ 05-30 ಗಂಟೆಯವರೆಗೆ ಕೆಲಸವನ್ನು ನಿರ್ವಹಿಸುತ್ತೇನೆ. ನನ್ನ ವಾಸ್ತವ್ಯ ಹಳದೀಪುರ ಗ್ರಾಮದಲ್ಲಿ ಇದೆ. ನಾನು ಮಾತೋಶ್ರಿ ಬ್ಯಾಂಕಿಗೆ ಸೇರುವ ಪೂರ್ವದಲ್ಲಿ ವಿವಿಧ ಬೇರೆ ಬೇರೆ ಖಾಸಗಿ ಉದ್ಯೋಗವನ್ನು ಮಾಡುತ್ತಿದ್ದೇನು. ನಾನು ಖಾಸಗಿ ಉದ್ಯೋಗವನ್ನು ಉಡುಪಿ, ಹುಬ್ಬಳ್ಳಿಯಲ್ಲಿ ಮಾಡುತ್ತಿದ್ದೇನು.

2. ಆರೋಪಿತನು ನನಗೆ ಮೊದಲಿನಿಂದಲು ಪರಿಚಯಸ್ಥನಾಗಿರುತ್ತಾನೆ. ಆರೋಪಿತನು ನನಗೆ ನಾನು ಚಿಕ್ಕ ವಯಸ್ಸಿನಿಂದ ಪರಿಚಯಸ್ಥನಾಗಿರುತ್ತಾನೆ. ಆರೋಪಿತನು ನನ್ನ ಊರಿನವನಾಗಿರುತ್ತಾನೆ. ಆರೋಪಿತನು ಅಂಕೋಲಾ ತಾಲೂಕಿನವರಾಗಿರುತ್ತಾರೆ. ಫಿರ್ಯಾದಿ ಯು ನನಗೆ 12-13 ವರ್ಷಗಳಿಂದ ಪರಿಚಯಸ್ದ.ನಾಗಿರುತ್ತಾರೆ. ಆತನು ನನ್ನ ಸಂಬಂಧಿಕನಾಗಿರುವುದಿಲ್ಲ. ಫಿರ್ಯಾದಿಯು ಹೊನ್ನಳ್ಳಿಯಲ್ಲಿ ವಾಸ್ತವ್ಯದಲ್ಲಿ ಇದ್ದಾನೆ. ಫಿರ್ಯಾದಿಯು ವ್ಯಾಪಾರಸ್ಥನಾಗಿರುತ್ತಾನೆ. ಫಿರ್ಯಾದಿಯು ವಿದೇಶದಲ್ಲಿ ಇದ್ದು ಹಾಗೂ ಭೂ ವ್ಯವಹಾರಗೆ ಸಂಬಂಧಿಸಿದಂತಹ ಕೆಲಸಗಳನ್ನು ಮಾಡುತ್ತಿದ್ದನು.

ಫಿರ್ಯಾದಿಯು ವಿದೇಶದಿಂದ ಬಂದು ನಂತರದಲ್ಲಿ ಭೂ ವ್ಯವಹಾರಕ್ಕೆ ಸಂಬಂಧಿಸಿದ ಕೆಲಸಗಳನ್ನು ಮಾಡುತ್ತಿದ್ದರು.

**(ಈ ಹಂತದಲ್ಲಿ ಆರೋಪಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದರಿಂದ ಸಮಯವಕಾಶ ನೀಡಲಾಯಿತು)**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ.

ಸಹಿ ಇದೆ.

ಪ್ರಭಾರ .ಪ್ರ.ದ.ನ್ಯಾ.ದಂ. ಕುಮಟಾ